ಪ್ರತಿಭಟನೆ ಮಾಡಿ ನಮ್ಮ ಕ್ಷೇತ್ರಕ್ಕೆ ಅದು ಬೇಕೆಂಬ ಒತ್ತಾಯ ಆ ಸಂದರ್ಭದಲ್ಲಿಯೂ ಇತ್ತು, ಮತ್ತೆ ಈಗಲೂ ಸಹ ಆ ಒತ್ತಾಯ ಇದೆ. ಸಿದ್ದಾಪುರ ಹಿಂದುಳಿದ ಪ್ರದೇಶವಾಗಿದೆ. ಕುಂಬಾರವಾಡದಲ್ಲಿ ಈಗ ಸುಮಾರು 300 ಜನ ಪ್ರೌಢಶಾಲೆಯ ವಿದ್ಯಾರ್ಥಿಗಳಿದ್ದಾರೆ. ಮತ್ತೆ ಅತೀ ಹಿಂದುಳಿದ ಪ್ರದೇಶವೆಂದು ನಂಜುಂಡಪ್ಪ ವರದಿಯಲ್ಲಿ ಬಂದಿದೆ. ಆದ್ದರಿಂದ ಅದನ್ನು ಅಲ್ಲಿಗೆ ಸ್ಥಳಾಂತರ ಮಾಡುವುದಕ್ಕೆ ನಾವು ಶಿಫಾರಸ್ಸು ಮಾಡಿದ್ದೇವೆ. ಮತ್ತೆ ಮಾನ್ಯ ವಿಶ್ವೇಶ್ವರ ಹೆಗಡೆಯವರ ಕ್ಷೇತ್ರಕ್ಕೂ ಸಹ ಮಂಜೂರು ಮಾಡುವುದಕ್ಕೆ ಶಿಫಾರಸ್ಸು ಮಾಡಿದ್ದೇವೆ. ಆದ್ದರಿಂದ, ಆ ಸಮಸ್ಯೆಯನ್ನು ಇಲ್ಲಿಗೆ ಮುಕ್ತಾಯ ಮಾಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು :– ಆಯಿತು.

7. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾನಿರ್ಣಯದ ಮೇಲೆ ಮುಂದುವರೆದ ಚರ್ಚೆ:

ಶ್ರೀ ಪ್ರಮೋದ್ ಮಧ್ವರಾಜ್(ಉಡುಪಿ) :– ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಬಸವರಾಜ ರಾಯರೆಡ್ಡಿಯವರು ರಾಜ್ಯಪಾರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವಕ್ಕೆ ಸೂಚನೆಯನ್ನು ಕೊಟ್ಟಿರುವುದನ್ನು ನಾನು ಅನುಮೋದಿಸಿ ನಿಮ್ಮ ಮುಂದೆ ಪ್ರಥಮ ಬಾರಿಗೆ ಮಾತನಾಡುವುದಕ್ಕೆ ನಿಂತಿದ್ದೇನೆ. ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಂಥ ಸನ್ಮಾನ್ಯ ಸಭಾಧ್ಯಕ್ಷರಿಗೆ ಹಾಗೂ ನಮ್ಮ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಯ ಸಚಿವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಈ ಸದನಕ್ಕೆ ನನ್ನ ತಂದೆಯವರು 1962ರಲ್ಲಿ ಪ್ರದೇಶ ಮಾಡಿದಂಥ ಸಂದರ್ಭದಲ್ಲಿ ಶ್ರೀಮಾನ್ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದರು. ಅದೇ ರೀತಿಯಲ್ಲಿ ನನ್ನ ತಾಯಿಯವರು 1972ನೇ ಇಸವಿಯಲ್ಲಿ ಈ ಸದನಕ್ಕೆ ಪ್ರವೇಶ ಮಾಡಿದಾಗ ಶ್ರೀಮಾನ್ ದೇವರಾಜ ಅರಸುರವರು ಮುಖ್ಯಮಂತ್ರಿಗಳಾಗಿದ್ದರು. ಪ್ರಾಯಶಃ ನಮ್ಮ ರಾಜ್ಯಪಾಲರ ಭಾಷಣದ ವಂದನಾರ್ಪಣಾ ಪ್ರಸ್ತಾವದ ಒಂದು ಮರ್ಮವನ್ನು ನೋಡಿದಾಗ ಇವತ್ತು ನಾನು ಈ ಸದನಕ್ಕೆ ಪ್ರವೇಶ ಮಾಡಿರುವಂಥ ಸಂದರ್ಭದಲ್ಲಿ ಸನ್ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದಾರೆ. ಅವರ ಸಂಕಲ್ಪ ಪ್ರಾಯಶಃ ಮಾನ್ಯ ನಿಜಲಿಂಗಪ್ಪನವರ ಪ್ರಾಮಾಣಿಕತನ ಮತ್ತು ಮಾನ್ಯ ದೇವರಾಜ ಅರಸುರವರ ಮುತ್ಸದ್ದಿತನವನ್ನು ಅವರು ಮೈಗೂಡಿಸಿಕೊಳ್ಳುತ್ತಾರೆಂಬ ಮಾತನ್ನು ಈ

ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ಸನ್ಮಾನ್ಯ ಸಿದ್ದರಾಮಯ್ಯನವರ ಮುತ್ಸದ್ದಿತನದ ಬಗ್ಗೆ ಏಕೆ ಹೇಳುತ್ತೇನೆಂದರೆ, ಮೊನ್ನೆದಿವಸ Congress Legislature Party Meeting ನಡೆಯುವಂಥ ಸಂದರ್ಭದಲ್ಲಿ ಅವರು ನಮ್ಮ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸದಸ್ಯರಿಗೆ ಹೇಳಿದ ಮಾತು ಏನೆಂದರೆ, ನಾನು ಅಭಿವೃದ್ಧಿಯ ದೃಷ್ಟಿಯಲ್ಲಿ ತಾರತಮ್ಯ ಮಾಡುವುದಿಲ್ಲ, ವಿರೋಧ ಪಕ್ಷದ ಸದಸ್ಯರಿಗೂ ಮತ್ತು ಆಡಳಿತ ಪಕ್ಷದ ಸದಸ್ಯರ ನಡುವೆ ಯಾವುದೇ ಒಂದು ಗ್ರ್ಯಾಂಟ್‌ನಲ್ಲಿ ತಾರತಮ್ಯ ಮಾಡುವುದಿಲ್ಲವೆಂಬ ಮಾತನ್ನು ಸಿಎಲ್‌ಪಿ ಸಭೆಯಲ್ಲಿ ಹೇಳುವುದರ ಮೂಲಕ ಅವರೊಬ್ಬರು ಮುತ್ಸದ್ದಿ ಎಂದು ತೋರಿಸಿದ್ದಾರೆ. ಅವರು ಹೇಳಿದಂಥ ಮಾತು ಏನೆಂದರೆ, ಹಿಂದಿನ ಸರ್ಕಾರದವರು ತಾರತಮ್ಯ ಮಾಡಿದ್ದರೂ ಕೂಡ ನಮ್ಮ ಸರ್ಕಾರದಲ್ಲಿ ಮಾಡುವುದಿಲ್ಲವೆಂದು ಹೇಳಿ ಅವರು ಮುತ್ಸದ್ದಿತನವನ್ನು ತೋರಿಸಿರುವುದನ್ನು ನಾವು ಮೆಚ್ಚಿಸಿಕೊಳ್ಳಬೇಕಾಗುತ್ತದೆ ಎಂಬ ಮಾತನ್ನು ಈ ಸಂದಭರ್ದಲ್ಲಿ ಹೇಳುತ್ತೇನೆ. ಇವತ್ತಿನ ದಿವಸ ಜನ ಬದಲಾವಣೆಯನ್ನು ಬಯಸಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದಾರೆ. ಬದಲಾವಣೆ ಎಂದರೆ, ಕೇವಲ ಸರ್ಕಾರದ ಬದಲಾವಣೆ ಅಲ್ಲ, ಈ ಬದಲಾವಣೆ should be for a better atmosphere, it is not a vote for change, it is a vote for change for the better ಆ ರೀತಿಯಲ್ಲಿ ಪ್ರಾಯಶಃ ಬದಲಾವಣೆಯನ್ನು ತರುವಂಥ ಒಂದು ಆದೇಶವನ್ನು ಜನರು ಕೊಟ್ಟಿದ್ದಾರೆ. ಆ ನಿಟ್ಟಿನಲ್ಲಿ ನಮ್ಮ ರಾನ್ಯಪಲರ ಭಾಷಣ ಏನಿದೆ, ಅದು ಪ್ರಾಯಶಃ 100 ಕ್ಕೆ 100ರಷ್ಟು ಅನುಷ್ಠಾನಗೊಂಡಂಥ ಸಂದರ್ಭದಲ್ಲಿ ಕರ್ನಾಟಕ ರಾಜ್ಯದಲ್ಲಿ ಒಂದು ಸುವರ್ಣಯುಗ ಪ್ರಾರಂಭವಾಗುತ್ತದೆ ಎಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವು ಸಂಖ್ಯಾ ಶಾಸ್ತ್ರದ ಪ್ರಕಾರ ಮಾತನಾಡುವುದಾದರೆ, ಇದು ನಮ್ಮ 14ನೇ ವಿಧಾನ ಸಭೆ ಆಗಿದೆ. 1 ಮತ್ತು 4 ಅನ್ನು ಸೇರಿಸಿದರೆ 5 ಆಗುತ್ತದೆ. ಇವತ್ತು 5ನೇ ತಾರೀಖು ಆಗಿದ್ದು, ನಾನು ನಿಂತು ಮಾತನಾಡಿದ್ದೇನೆ. "ಪಂಚಮಂ ಕಾರ್ಯಸಿದ್ಧಿ:" ಎಂಬ ನಮ್ಮ ಗಾದೆಯ ಮಾತಿನಂತೆ ಪ್ರಾಯಶಃ ನಮ್ಮ 14ನೇ ವಿಧಾನ ಸಭೆಯಲ್ಲಿ ಈಗ ಸೇರಿದ್ದೇವೆ. ಇಲ್ಲಿಂದ 5 ವರ್ಷ ಬಿಟ್ಟು ನಾವು ಪುನಃ ಮತದಾರರ ಹತ್ತಿರ ಹೋದಾಗ ಇಡೀ ದೇಶದಲ್ಲಿಯೇ ಮೊದಲಿಗೆ ಕರ್ನಾಟಕ ರಾಜ್ಯದಲ್ಲಿ ಸುವರ್ಣಯುಗ ಆಯಿತೆಂಬ ದಾಖಲೆಯನ್ನು ಮಾಡತಕ್ಕಂಥ ಒಂದು ವ್ಯವಸ್ಥೆಯನ್ನು ನಾವೆಲ್ಲ ಸದಸ್ಯರು ಪಕ್ಷಭೇದವನ್ನು ಮರೆತು ಮಾಡೋಣ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ಪ್ರಾಯಶಃ ಸನ್ಮಾನ್ಯ ಮುಖ್ಯಮಂತ್ರಿಗಳು ಅಧಿಕಾರವನ್ನು ಸ್ವೀಕಾರ ಮಾಡಿದಂಥ

ಸಂದರ್ಭದಲ್ಲಿ he has taken right steps in the right direction ಎಂದು ಹೇಳಬೇಕಾಗುತ್ತದೆ.

(ಈ ಹಂತದಲ್ಲಿ ಮಾನ್ಯ ಬಿ.ಆರ್.ಯಾವಗಲ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅವರು ಮುಖ್ಯಮಂತ್ರಿಗಳಾಗಿ ಪ್ರಮಾಣವಚನ ಸ್ವೀಕಾರ ಹೊಡಿದ ಕೆಲವೇ ತಾಸುಗಳಲ್ಲಿ ಅತ್ಯಂತ ಕ್ರಾಂತಿಕಾರಿಯಾದಂಥ ಕೆಲವು ಘೋಷಣೆಗಳನ್ನು ಮಾಡಿರತಕ್ಕಂಥದ್ದು ಪ್ರಾಯಶಃ ರಾಜ್ಯದ ಮುಂದಿನ ಅಭಿವೃದ್ಧಿಗೆ ಅವರು ಕೊಟ್ಟಂಥ ಒಂದು ಸಂಕೇತ, ಸಂದೇಶ ಎಂದು ನಾನು ಈ ಸಂದರ್ಭದಲ್ಲಿ ಭಾವಿಸುತ್ತೇನೆ. ಅದರಲ್ಲಿ ಇರತಕ್ಕಂಥ ಮೂಲ ತತ್ವ ಏನೆಂದರೆ, ಇಡೀ ರಾಜ್ಯದಲ್ಲಿ ಯಾವುದೇ ರೀತಿಯ ತಾರತಮ್ಯ ಇಲ್ಲ ಎನ್ನತಕ್ಕಂಥದ್ದಾಗಿದೆ. ಎಲ್ಲ ಜನರನ್ನು ಒಟ್ಟಿಗೆ ತೆಗೆದುಕೊಂಡು ಹೋಗುತ್ತೇವೆ. "ಸರ್ವೇ ಜನಾ ಸುಖಿನೋ ಭವಂತು" ಎನ್ನತಕ್ಕಂಥ ಆಧಾರದಲ್ಲಿ ನಾವು ಆಡಳಿತ ಮಾಡುತ್ತೇವೆ. ಏಕೆಂದರೆ, ಕೆಲವು ಪಕ್ಷದವರು ಕೆಲವೇ ಜನಾಃ ಸುಖಿನೋ ಭವಂತು ಎಂದು ಯೋಚನೆ ಮಾಡಿದರೆ ನಾವು ಸರ್ವೇ ಜನಾ ಸುಖಿನೋ ಭವಂತು ಎಂಬ ರೀತಿಯಲ್ಲಿ ಆಡಳಿತದ ವ್ಯವಸ್ಥೆಯನ್ನು ಮಾಡತಕ್ಕಂಥ ಒಂದು ದೊಡ್ಡ ಘೋಷಣೆಯನ್ನು ಈ ರಾಜ್ಯಪಾಲರ ಭಾಷಣದಲ್ಲಿ ಕಾಣುವುದಕ್ಕೆ ಸಿಗುತ್ತದೆ. ಪ್ರಾಯಶಃ ಇವತ್ತಿನ ದಿವಸ ನಮ್ಮ ಹಳ್ಳಿ ಪ್ರದೇಶಗಳಲ್ಲಿ ಕೂಡ ಒಂದು ಯುವಕ ಮಂಡಳಿ, ಒಂದು ದೇವಸ್ಥಾನ, ಒಂದು ಭಜನಾ ಮಂದಿರ, ಒಂದು ಮಸೀದಿ, ಒಂದು ಚರ್ಚ್ ಇರುತ್ತದೆ. ಅಲ್ಲಿಯ ಲೆಕ್ಕಪತ್ರಗಳನ್ನು ಬಹಳಷ್ಟು ಜಾಗ್ರತೆಯಿಂದ ನಮ್ಮ ಹಳ್ಳಿಯ ಜನ ನೋಡಿಕೊಳ್ಳುತ್ತಾರೆ. ಏಕೆಂದರೆ, ಹತ್ತಾರು ಜನರಿಂದ ಬಂದಿರತಕ್ಕಂಥ ದೇಣಿಗೆ ಹಣವನ್ನು ಯಾರೂ ಕೂಡ ವಂಚನೆ ಮಾಡಬಾರದೆಂಬ ದೃಷ್ಟಿಯಿಂದ ಬಂದಂಥ ಆಯ ಮತ್ತು ಖರ್ಚು ಮಾಡತಕ್ಕಂಥ ಲೆಕ್ಕಪತ್ರಗಳನ್ನು ಎಷ್ಟು ಚೆನ್ನಾಗಿ ನಮ್ಮ ಹಳ್ಳಿ ಜನ ಮಾಡುತ್ತಾರೆ. ಪ್ರಾಯಶಃ ಅಂಥದ್ದೇ ಒಂದು ರೀತಿಯಲ್ಲಿ ಇವತ್ತಿನ ದಿವಸ ಸರ್ಕಾರ ಕೂಡ ನಡೆಯಬೇಕಾಗುತ್ತದೆ. ಜನರ ತೆರಿಗೆಯ ಹಣದಲ್ಲಿ ಯಾವುದೇ ರೀತಿಯ ವಂಚನೆ ಮತ್ತು ಮೋಸ ಆಗದ ರೀತಿಯಲ್ಲಿ anaccountable administration ಅಂದರೆ, clean administration ಅನ್ನು ಕೊಡುತ್ತೇನೆಂಬ ಮಾತು ರಾಜ್ಯಪಾಲರ ಭಾಷಣದಲ್ಲಿದೆ. ಪ್ರಾಯಶಃ ಅದನ್ನು ತರುವಂಥ ಶಕ್ತಿ ಶ್ರೀಮಾನ್ ಸಿದ್ದರಾಮಯ್ಯನವರಿಗೆ ಇದೆ. ಏಕೆಂದರೆ, ಅವರ ಹಿನ್ನೆಲೆಯನ್ನು ನೋಡಿದಾಗ ಅವರು ಅತ್ಯಂತ ಬಿಗುವಾದಂಥ ಆಡಳಿತಕ್ಕೆ ಹೆಸರುವಾಸಿಯಾಗಿದ್ದಾರೆಂಬ

ಮಾತನ್ನು ಹೇಳಬೇಕಾಗುತ್ತದೆ. ಮಾನ್ಯ ಬಸವರಾಜ ರಾಯರೆಡ್ಡಿಯವರು ಹೇಳಿದ ಹಾಗೆ ರಾಜಕೀಯ ಎಂದರೆ, ಹಣ ಸಂಪಾದನೆ ಮಾಡತಕ್ಕಂಥ ಒಂದು ಯಂತ್ರ ಎಂಬ ರೀತಿಯಿಲ್ಲಿ ಜನ ಇವತ್ತು ನೋಡುತ್ತಿದ್ದಾರೆ. ಆದ್ದರಿಂದ, ರಾಜಕೀಯದಲ್ಲಿ ಜನ ಸೇವೆ ಮಾಡುವುದಕ್ಕೆ ಕೂಡ ಆಗುತ್ತದೆ ಎಂದು ಅಂದರೆ, social service ಕೂಡ ಮಾಡುವುದಕ್ಕೆ ಆಗುತ್ತದೆ ಎನ್ನುವ ರೀತಿಯಲ್ಲಿ ಈ ಸರ್ಕಾರ ಮುಂದುವರಿಯುತ್ತದೆ ಎನ್ನತಕ್ಕಂಥ ಸಂಪೂರ್ಣ ವಿಶ್ವಾಸ ನನಗೆ ಇದೆ. ಅದರಲ್ಲಿಯೂ ವಿಶೇಷವಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಜನರಿಗೆ ವಿಶೇಷವಾದಂಥ ಘೋಷಣೆಗಳನ್ನು ಮಾಡಿರತಕ್ಕಂಥದ್ದು ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿ 65 ವರ್ಷಗಳ ನಂತರ ಕೂಡ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರ ಬಗ್ಗೆ ರಾಜ್ಯದ ಬೇರೆ ಕಡೆಗಳಲ್ಲಿ ತಾರತಮ್ಯ ಮಾಡತಕ್ಕಂಥದ್ದನ್ನು ನಾವು ಇಪತ್ತೂ ಸಹ ನೋಡುತ್ತಿದ್ದೇವೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗದ ಜನರಿಗೆ ಸೂಕ್ತವಾದಂಥ ಶಕ್ತಿಯನ್ನು ಕೊಡುವಂಥ ಘೋಷಣೆಯನ್ನು ರಾಜ್ಯಪಾಲರ ಭಾಷಣದಲ್ಲಿ ಮಾಡಲಾಗಿದೆ. ಹಾಗೆಯೇ, ಹಿಂದುಳಿದ ವರ್ಗ ಮತ್ತು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಹಾಸ್ಟೆಲ್‌ಗಳ infrastructure ಅನ್ನು ನಾವು improve ಮಾಡುತ್ತೇವೆ. ಇವತ್ತಿನ ದಿವಸ ಬಡ ಮಕ್ಕಳು ಶಾಲಾ-ಕಾಲೇಜುಗಳಿಗೆ ಹೋಗಿ ವಿದ್ಯಾಭ್ಯಾಸ ಮಾಡುವುದಕ್ಕೆ ತಮ್ಮ ಊರುಗಳನ್ನು ಬಿಟ್ಟು ಬೇರೆ ಬೇರೆ ಪ್ರದೇಶಗಳಿಗೆ ಬಂದಾಗ ಅಲ್ಲಿನ ಹಾಸ್ಟೆಲ್‌ಗಳಲ್ಲಿ ಸರಿಯಾದ ವ್ಯವಸ್ಥೆ ಇಲ್ಲದೆ ಇದ್ದರೆ ಅವರು ಬಹಳ ದೊಡ್ಡ ಸಂಕಟವನ್ನು ಅನುಭವಿಸಬೇಕಾಗುತ್ತದೆ. ಆ ದೃಷ್ಟಿಯಿಂದ ಇವತ್ತಿನ ದಿವಸ ಹಾಸ್ಟೆಲ್‌ಗಳನ್ನು ಸಹ up-grade ಮಾಡುತ್ತೇವೆ. ಅದಕ್ಕೆ ಬೇಕಾದ infrastructure ಗಳನ್ನು ಕೊಡುತ್ತೇವೆಂಬ ಮಾತು ಇವತ್ತಿನ ರಾಜ್ಯಾಪಾಲರ ಭಾಷಣದಲ್ಲಿದೆ. ಈ ಸಂದರ್ಭದಲ್ಲಿ ಪ್ರಾಯಶಃ ನಮ್ಮ Forest Rights Act 2006ನಲ್ಲಿರುವಂತೆ ಯಾರು forest dwellers ಇದ್ದಾರೆ, ಅವರಿಗೆ ಸೂಕ್ತವಾದಂಥ ಭದ್ರತೆಯನ್ನು ಒಂದು ವರ್ಷದೊಳಗೆ ಕೊಡುತ್ತೇವೆಂಬ ಮಾತನ್ನು ಹೇಳಿದ್ದಾರೆ. ಇದಕ್ಕಿಂತ ಮೊದಲು ಇದರ ಬಗ್ಗೆ ಇಲ್ಲಿ ಚರ್ಚೆ ನಡೆಯಿತು. ಪ್ರಾಯಶಃ ಸುಪ್ರೀಂ ಕೋರ್ಟ್‌ನಲ್ಲಿರುವಂಥ J.N. Godavarnam –vs- Union of India ಕೇಸ್‌ನ ಬಗ್ಗೆ ನಮ್ಮ ಕರಾವಳಿ ಜಿಲ್ಲೆಗಳಲ್ಲಿಯ ಕೂಡ ಇವತ್ತಿನ ದಿವಸ ಎಲ್ಲ ಕಂದಾಯ ಇಲಾಖೆಯ ಭೂಮಿಯನ್ನು deemed forest ಎಂದು ಮಾಡಿರುವುದರಿಂದ ಅಲ್ಲಿ

ಯಾವುದೇ ಅಭಿವೃದ್ಧಿ ಕೆಲಸಗಳು ಆಗುತ್ತಿಲ್ಲ. ಹಾಗೆಯೇ ಜನರಿಗೆ ಭೂಮಿ ಕೊಡತಕ್ಕಂಥ ಕೆಲಸಗಳು ಕೂಡ ಆಗುತ್ತಿಲ್ಲ. ಪ್ರಾಯಶಃ ನಮ್ಮ ದಕ್ಷಿಣ ಕನ್ನಡ ಮತ್ತು ಉಡುಪಿ ಹಾಗೂ ಕರಾವಳಿ ಜಿಲ್ಲೆಗಳಲ್ಲಿ deemed forest ಎಂದು ಏನು ಘೋಷಣೆ ಆಗಿರುವ ಬಗ್ಗೆ ಚರ್ಚೆಯಾಗಿ ನಿರ್ಧಾರ ಮಾಡತಕ್ಕಂಥ ಒಂದು ವ್ಯವಸ್ಥೆ ಆಗಬೇಕೆಂದು ನಾನು ಭಾವಿಸುತ್ತೇನೆ.

ಅದೇ ರೀತಿಯಾಗಿ ನಮ್ಮ ಸರ್ಕಾರ ಇವತ್ತು ಪರಿಶಿಷ್ಟ ಜಾತಿ ಪರಿಶೀಷ್ಟ ಪಂಗಡ ಹಿಂದುಳಿದ ವರ್ಗ ಮತ್ತು ಮೈನಾರಿಟಿಯವರಿಗೆ ಕೊಟ್ಟಂಥ ಸಾಲವನ್ನು one-time measure ಆಗಿ ಮನ್ನಾ ಮಾಡತಕ್ಕಂಥ ಒಂದು ಬಹಳ ದೊಡ್ಡ ಘೋಷಣೆಯನ್ನು ಮಾಡಿದ್ದಾರೆ. ಈ ಘೋಷಣೆಯನ್ನು ಮಾಡಿ ಇವತ್ತು ರಾಜ್ಯಪಾಲರ ಭಾಷಣದಲ್ಲಿ ಓದಿಸಿದ್ದಾರೆ. ಅದಕ್ಕೋಸ್ಕರ ಯಾವಾಗಲೂ ರಾಜ್ಯಪಾಲರ ಭಾಷಣದಲ್ಲಿ ಘೋಷಣೆಯನ್ನು ಮಾಡಿ ನಂತರ ಅನುಷ್ಠಾನ ಮಾಡುವುದಾದರೆ ನಮ್ಮ ಸರ್ಕಾರ ಅನುಷ್ಠಾನ ಮಾಡಿ ನಂತರ ಅದನ್ನು ರಾಜ್ಯಪಾಲರ ಭಾಷಣದಲ್ಲಿ ತರುವಂಥ ಒಂದು ಬಹಳ ದೊಡ್ಡ ಕೆಲಸವನ್ನು ಮಾಡಿದೆ ಎನ್ನತಕ್ಕಂಥ ಅಭಿನಂದನೆಯನ್ನು ಕೂಡ ನಾನು ಈ ಸಂದರ್ಭದಲ್ಲಿ ಕೊಡುತ್ತೇನೆ. ಕರ್ನಾಟಕ ಒಂದು ಕಾಲದಲ್ಲಿ it was one of the best Administered States in the country. ಇವತ್ತು ಬಹಳಷ್ಟು ಜನ investors ನಮ್ಮ ರಾಜ್ಯಕ್ಕೆ ಹೊರಗಿನಿಂದ ಬರುವಂಥ ಜನರಿಗೆ ಇವತ್ತು ಇಲ್ಲಿಯ ವಾತಾವರಣದಲ್ಲಿ ಸ್ವಲ್ಪಮಟ್ಟಿನ ಈ ಒಂದು ರಾಜಕೀಯ ಅಸ್ಥಿರತೆ, ಭ್ರಷ್ಟಾಚಾರ ಮುಂತಾದ ಸಂದರ್ಭದಲ್ಲಿ ಹೊರಗಿನಿಂದ ಬರುವುದಕ್ಕೆ ಹೆದರುವಂಥ ಇಂತಹ ಒಂದು ಸಂದರ್ಭದಲ್ಲಿ ಇವತ್ತು ಕರ್ನಾಟಕದ ಗತವೈಭವ ಏನಿದೆ, ಆ ಗತವೈಭವವನ್ನು ಮರುಕಳಿಸಿ ಪಡೆಯುವಂಥ ರೀತಿಯಲ್ಲಿ ನಮ್ಮ ಸರ್ಕಾರ ಕೆಲಸ ಮಾಡುತ್ತದೆ ಎನ್ನತಕ್ಕಂತಹ ವಿಶ್ವಾಸ ವ್ಯಕ್ತಪಡಿಸುತ್ತೇನೆ. ಅದರಲ್ಲಿಯೂ ವಿಶೇಷವಾಗಿ infrastructure development, land ಇರಬಹುದು, power ಇರಬಹುದು, water ಇರಬಹುದು, ಅದಕ್ಕೆ ಬೇಕಾದಂಥ ಎಲ್ಲಾ ಒಂದು ಸಹಕಾರವನ್ನು ಕೊಡುತ್ತೇವೆ ಎನ್ನತಕ್ಕಂಥ ಮಾತು ಇವತ್ತು ಮಾನ್ಯ ರಾಜ್ಯಪಾಲರ ಭಾಷಣದಲ್ಲಿದೆ. ಆ ರೀತಿಯಲ್ಲಿ investors ನ್ನು ಕರ್ನಾಟಕಕ್ಕೆ ತರುವ ಮೂಲಕ ಪ್ರಾಯಶಃ ಮುಂದಿನ 5 ವರ್ಷದೊಳಗೆ ಕರ್ನಾಟಕದಲ್ಲಿ ಅತಿ ಹೆಚ್ಚು investment ಆಯಿತು ಎನ್ನುವ ದಾಖಲೆ ಮಾಡತಕ್ಕಂಥ ಸಾಮರ್ಥ್ಯ ಈ ಸರ್ಕಾರಕ್ಕೆ ಇದೆ ಎನ್ನತಕ್ಕಂಥ ವಿಶ್ವಾಸವನ್ನು

ವ್ಯಕ್ತಪಡಿಸುತ್ತೇನೆ. ಪ್ರಪಂಚದಲ್ಲಿ ಎಷ್ಟೋ ದೇಶಗಳು ಕೇವಲ ಪ್ರವಾಸೋದ್ಯಮದಿಂದ ಬದುಕುತ್ತವೆ. ಪ್ರವಾಸೋದ್ಯಮದಲ್ಲಿ main sources of income ಎಂದು ಮಾಡಿರುವುದನ್ನು ನಾವು ನೋಡಿದ್ದೇವೆ. ನಮ್ಮ ಕರ್ನಾಟಕದಲ್ಲಿ ಇಷ್ಟು ಪ್ರವಾಸೋದ್ಯಮ potential ಇದೆ. ಮತ್ತೆ ಬೇರೆ ಎಲ್ಲೂ ಇರಲಿಕ್ಕಿಲ್ಲ. ಅದೇ ರೀತಿ ವಿಶೇಷವಾಗಿ ನಮ್ಮ Beach Tourism ಕೂಡ ಇವತ್ತು ಕೇರಳ ಮತ್ತು ಗೋವಾದಲ್ಲಿ ಈ beach tourism ಹೇಗೆ improvement ಆಗಿದೆ, ಅದೇ ರೀತಿ ನಮ್ಮ ಕರ್ನಾಟಕ ಭಾಗದಲ್ಲಿಯೂ ಕೂಡ Beach Tourismನ್ನು ಮಾಡಿ ನಾವು ಇವತ್ತು ಪ್ರವಾಸೋದ್ಯಮಕ್ಕೆ ಬೇಕಾದಷ್ಟು ಶಕ್ತಿ ತುಂಬುವಂಥ ಕೆಲಸವನ್ನು ಮಾಡುತ್ತೇವೆ ಎನ್ನುವಂಥ ಭರವಸೆಯನ್ನು ಕೊಟ್ಟಿದ್ದಾರೆ. ನಮಗೆ ಉತ್ತಮವಾದಂಥ ಒಬ್ಬ ಪ್ರವಾಸೋದ್ಯಮ ಮಂತ್ರಿಗಳು ಕೂಡ ಸಿಕ್ಕಿದ್ದಾರೆ. ಅದೇ ರೀತಿಯಲ್ಲಿ IT,BT company ಗಳನ್ನು ಕೇವಲ ಬೆಂಗಳೂರಿನಲ್ಲಿ ಮಾತ್ರ ಆಧಾರವಾಗಿಟ್ಟುಕೊಂಡು ಬೆಂಗಳೂರಿನಲ್ಲಿ ಇವತ್ತು ಏನು congestion ಆಗಿದೆ, ಆ IT,BT Company ಗಳು ಹೊರ ಪ್ರದೇಶದಲ್ಲಿ ನಮ್ಮ ರಾಜ್ಯದ ಬೇರೆ ಬೇರೆ ನಗರಗಳಲ್ಲಿ ಏನು ಅಭಿವೃದ್ಧಿ ಪಡಿಸುವಂಥ ಒಂದು ಘೋಷಣೆಯನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಮಾಡಿದ್ದಾರೆ, ಅದನ್ನು ನಾವು ಸ್ವಾಗತಿಸುತ್ತೇವೆ ಎನ್ನುವಂಥ ಮಾತನ್ನು ಹೇಳುತ್ತೇನೆ. ಅದರಲ್ಲಿಯೂ ವಿಶೇಷವಾಗಿ ಅಲ್ಪಸಂಖ್ಯಾತರ ಮುಸ್ಲಿಂ ಮೈನಾರಿಟಿಗಳು ಏನು ಇವೆ, ಅವರಿಗೆ ಶಿಕ್ಷಣದಲ್ಲಿ ಉತ್ತಮವಾದಂಥ ಒಂದು ಅವಕಾಶವನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಇವತ್ತು ಹೇಳಿದ್ದಾರೆ. ಅದೇ ರೀತಿಯಲ್ಲಿ ನಮ್ಮ ರಾಜ್ಯದಲ್ಲಿ ಮಾತನಾಡುವಂಥ ಅನೇಕ ಭಾಷೆಗಳಾದ ತುಳು ಇರಬಹುದು, ಕೊಂಕಣಿ ಇರಬಹುದು, ಕೊಡವ, ಬ್ಯಾರಿ ಲಂಬಾಣಿ ಭಾಷೆಗಳಿಗೂ ಕೂಡ ಶಕ್ತಿ ತುಂಬುವಂಥ ಒಂದು ಘೋಷಣೆಯನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಮಾಡಿರುವಂಥದ್ದು ಅತ್ಯಂತ ಸಂತೋಷ. ಅದರಲ್ಲಿಯೂ ವಿಶೇಷವಾಗಿ ಹೆಣ್ಣು ಮಕ್ಕಳ ಮೇಲೆ ನಡೆಯತಕ್ಕಂಥ ದಬ್ಬಾಳಿಕೆಯನ್ನು ಸಂಪೂರ್ಣವಾದ ಒಂದು ರೀತಿಯಲ್ಲಿ ಅವರಿಗೆ ರಕ್ಷಣೆ ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ವಿಶೇಷವಾಗಿ ನಮ್ಮ ಕರಾವಳಿ ಭಾಗದಲ್ಲಿ ಇವತ್ತು moral policing ಎಂದು ನಡೆಯುತ್ತಿದೆ. ನಮ್ಮ ಹೆಣ್ಣು ಮಕ್ಕಳು ಯಾರ ಜೊತೆಯಲ್ಲಿ Ice cream ತಿನ್ನಬೇಕು, ಯಾರ ಜೊತೆಯಲ್ಲಿ ಊಟ ಮಾಡಬೇಕು, ಯಾವ ತರಹ ಡ್ರೆಸ್‌ನ್ನು

ಹಾಕಬೇಕು ಎನ್ನತಕ್ಕಂಥದ್ದನ್ನು ಕೆಲವು ಸಂಘ ಸಂಸ್ಥೆಗಳು ನಿರ್ಧಾರ ಮಾಡತಕ್ಕಂಥ ಒಂದು ವ್ಯವಸ್ಥೆ ಆಗಿದೆ. ಪ್ರಾಯಶಃ ಈ ದೇಶದಲ್ಲಿ ಪ್ರಜಾಪ್ರಭುತ್ವ ಇದೆ. ನಮ್ಮ ಹೆಣ್ಣು ಮಕ್ಕಳು ಏನು ಮಾಡಬೇಕು ಎನ್ನುವುದರ ಬಗ್ಗೆ ಸ್ವತಂತ್ರವಾಗಿ ನಿರ್ಧಾರ ಮಾಡತಕ್ಕಂಥ ಶಕ್ತಿ ಮತ್ತು ಯುಕ್ತಿ ಅವರಿಗೆ ಇರುವುದರಿಂದ moral policing ಗೆ ಒಂದು ಸಂಪೂರ್ಣವಾದ full stop ನ್ನು ಹಾಕುವಂಥ ಅಗತ್ಯ ಇದೆ ಎನ್ನುವಂಥದ್ದನ್ನು ನಾನು ಭಾವಿಸುತ್ತೇನೆ. ಇವತ್ತು ಸ್ವಸಹಾಯ ಸಂಘಗಳು ಅದರಲ್ಲಿಯೂ ವಿಶೇಷವಾಗಿ ಮಹಿಳೆಯರ ಬಗ್ಗೆ ಒಂದು ಕ್ರಾಂತಿಯನ್ನು ಮಾಡುತ್ತಿದೆ. ನಮ್ಮ ದಕ್ಷಿಣ ಕನ್ನಡ ಮತ್ತು ಅನೇಕ ಜಿಲ್ಲೆಗಳಲ್ಲಿ ಡಾ:ವೀರೇಂದ್ರ ಹೆಗ್ಗಡೆಯವರ ನೇತೃತ್ವದಲ್ಲಿ ನಡೆಯುವಂಥ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಇವತ್ತು ಮಹಿಳೆಯರಿಗೆ ವಿಶೇಷವಾದ ಶಕ್ತಿಯನ್ನು ಕೊಡತಕ್ಕಂಥದ್ದು ಮಹಿಳೆಯರು ತಮ್ಮ ಸ್ವಂತ ಕಾಲ ಮೇಲೆ ನಿಲ್ಲುವಂಥ ಒಂದು ವ್ಯವಸ್ಥೆಗಳು ಆಗುತ್ತಿದೆ. ಆ ದೃಷ್ಟಿಯಲ್ಲಿ ಅವರಿಗೆ ಕೊಡಬೇಕಾದಂಥ revolving funds ಮತ್ತು exclusive banking and marketing facilities, ಇವತ್ತು ನಮ್ಮ ಮಹಿಳೆಯರು ತಮ್ಮ ಸ್ವಂತ ಕಾಲಮೇಲೆ ನಿಲ್ಲುವಂಥ ಒಂದು ವ್ಯವಸ್ಥೆಯ ಬಗ್ಗೆ ಇವತ್ತು ನಮ್ಮ ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ ಅದು ಅತ್ಯಂತ ಸ್ವಾಗತಾರ್ಹ ಮತ್ತು ಪ್ರಶಂಸಾರ್ಹ ಎಂದು ನಾನು ಭಾವಿಸುತ್ತೇನೆ. ಅದರಲ್ಲಿಯೂ ವಿಶೇಷವಾಗಿ ಯಾರು ಅಂಗವಿಕಲರು ಇದ್ದಾರೆ, ಅವರಿಗೆ ವಿಶೇಷವಾದ ಒಂದು ಶಕ್ತಿಯನ್ನು ಕೊಡುವಂಥ ಒಂದು ಘೋಷಣೆಯನ್ನು ಮಾಡಿದ್ದಾರೆ. ಇವತ್ತು ಅಂಗವೈಕಲ್ಯದಿಂದ ಬಳಲುತ್ತಿರುವಂಥ ಅನೇಕರಿಗೆ ಉದ್ಯೋಗವಿಲ್ಲ, ಮನೆಯಲ್ಲಿ ನೋಡಿಕೊಳ್ಳುವವರು ಇಲ್ಲ, ಅಂತಹ ಪರಿಸ್ಥಿತಿಯಲ್ಲಿ ಅವರಿಗೆ ವಿಶೇಷವಾದಂಥ ಕಾರ್ಯಕ್ರಮವನ್ನು ಘೋಷಣೆ ಮಾಡಿರತಕ್ಕಂಥದ್ದು ಬಹಳ ಸಂತೋಷದ ವಿಚಾರವೆಂದು ನಾನು ಭಾವಿಸಿಕೊಳ್ಳುತ್ತೇನೆ. ಇದೇ ಸಂದರ್ಭದಲ್ಲಿ ನಮ್ಮ ಶಾಲೆಗಳಲ್ಲಿ quality education ಕೊಡತಕ್ಕಂಥದ್ದು ಬಹಳ ಮುಖ್ಯ. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮಂತ್ರಿಗಳು ಇದ್ದಾರೆ. ನಮ್ಮ ಶಾಲೆಯ ಕಟ್ಟಡಗಳಲ್ಲಿ ಕೇವಲ ಬೋಧನೆ ಮಾತ್ರ ಅಲ್ಲ, ಶಾಲೆಯ ಸಮಯ ಅಲ್ಲದ ಸಂದರ್ಭದಲ್ಲಿ ನಮ್ಮ ಹಳ್ಳಿಯ ಯುವಕರಿಗೆ skill development and training centres ಶಾಲಾ ಕಟ್ಟಡಗಳಲ್ಲಿ ಪ್ರಾರಂಭ ಮಾಡುವುದರ ಮೂಲಕ ನಮ್ಮ ಹಳ್ಳಿಯ ಜನರಿಗೆ ಅವರ ವೃತ್ತಿಯಲ್ಲಿ development ಆಗುವ ರೀತಿಯಲ್ಲಿ ಒಂದು ವಿಶೇಷವಾದ ಒಂದು ತರಬೇತಿಯನ್ನು ಕೊಡತಕ್ಕಂಥ

ವ್ಯವಸ್ಥೆ ಕೂಡ ಮಾಡಬಹುದಾಗಿದೆ ಎನ್ನತಕ್ಕಂಥ ಸಲಹೆಯನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಯಾವುದೇ ಕನ್ನಡ ಮಾಧ್ಯಮ ಶಾಲೆಯನ್ನು ಕ್ಷುಲ್ಲಕ ಕಾರಣಕ್ಕಾಗಿ ಮುಚ್ಚುವುದಕ್ಕೆ ಬಿಡುವುದಿಲ್ಲ ಎನ್ನತಕ್ಕಂಥ ರೀತಿಯಲ್ಲಿ ಕನ್ನಡದ ಬಗ್ಗೆ ಸರ್ಕಾರಕ್ಕೆ ಇರುವಂಥ ಕಾಳಜಿಯನ್ನೂ ಕೂಡ ನಮ್ಮ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಇವತ್ತು ಪ್ರತಿಬಿಂಬಿಸಲಾಗಿದೆ. ಅದನ್ನೂ ಕೂಡ ಈ ಸಂದರ್ಭದಲ್ಲಿ ಸ್ವಾಗತಿಸುತ್ತೇನೆ. ಉನ್ನತ ಶಿಕ್ಷಣದಲ್ಲಿ ನಮ್ಮ ರಾಜ್ಯದಲ್ಲಿ ಶೇಕಡ 12 ರಷ್ಟು ಜನರು ಡಿಗ್ರಿ ಕಾಲೇಜಿನಿಂದ ಹೊರಗೆ ಬರುವಂಥ ಒಂದು ಪರಿಸ್ಥಿತಿಯಲ್ಲಿ ಇಲ್ಲ. 88% ಜನ ನಮ್ಮ ಯುವಕ ಯುವತಿಯರು ಕಾಲೇಜು ಶಿಕ್ಷಣವನ್ನು ಮುಗಿಸಿಕೊಂಡು ಹೊರಗೆ ಬಂದಿಲ್ಲ. ಅಂತಹ ಒಂದು college higher education ಕೂಡ ಇವತ್ತಿನ ನಮ್ಮ ಜನ ಸಾಮಾನ್ಯರ ಮಕ್ಕಳಿಗೆ ಸಿಗುವಂಥ ರೀತಿಯಲ್ಲಿ ಬಹಳಷ್ಟು ಒತ್ತು ಕೊಡುವಂಥ ಕೆಲಸ ಕೂಡ ಆಗಿದೆ. ಅದನ್ನೂ ಕೂಡ ನಾವು ಈ ಸಂದರ್ಭದಲ್ಲಿ ಸ್ವಾಗತಿಸುತ್ತೇವೆ. ಇನ್ನೊಂದು ವಿಶೇಷವಾಗಿ ಅನಾರೋಗ್ಯದ ಬಗ್ಗೆ ಹೇಳಬೇಕಾಗುತ್ತದೆ. ಏಕೆಂದರೆ ನಮ್ಮ ಮಗಳ ಮದುವೆ ಯಾವಾಗ ಎನ್ನುವುದು ಗೊತ್ತಿರುತ್ತದೆ. ನಮ್ಮ ಮಗನನ್ನು ಕಾಲೇಜಿಗೆ ಸೇರಿಸುವುದು ಯಾವಾಗ ಎನ್ನುವುದು ನಮಗೆ ಗೊತ್ತಿರುತ್ತದೆ. ಆದರೆ ನಾವು ಆಸ್ಪತ್ರೆಗೆ ಹೋಗುವುದು ಯಾವಾಗ, ಸ್ಮಶಾನಕ್ಕೆ ಯಾವಾಗ ಹೋಗುತ್ತೇವೆ ಎನ್ನುವ ಈ ಎರಡು ವಿಚಾರಗಳು ನಮಗೆ ಯಾರಿಗೂ ಗೊತ್ತಿರುವಂಥ ಸಂಗತಿಗಳು ಅಲ್ಲ. ಇವತ್ತು ಮನೆಯಲ್ಲಿ 1000 ರೂ.ಗಳು ಇಲ್ಲದಿರುವಂಥ ಒಂದು ಸಂದರ್ಭದಲ್ಲಿ ಏನಾದರೂ heart attack ಅಥವಾ ಇನ್ನೊಂದು ಆಗಿ ಆಸ್ಪತ್ರೆಗೆ ಸೇರಿದಾಗ 1000 ರೂ.ಗಳು ಮನೆಯಲ್ಲಿ ಇಲ್ಲದವರು ಈಗಲೇ ಒಂದು ಲಕ್ಷ ರೂ.ಗಳನ್ನು ತಂದು ಕೊಡಬೇಕೆಂದು ಆಸ್ಪತ್ರೆಯವರು ಹೇಳಿದಾಗ ಅವರು ಯಾವ ರೀತಿಯಾಗಿ ಆ ಪರಿಸ್ಥಿತಿಯನ್ನು ಎದುರಿಸಬೇಕು, ಅವರು ಹಣ ಇಲ್ಲದೆ ಜೀವವನ್ನು ಕಳೆದುಕೊಳ್ಳುವಂಥ ಒಂದು ದುಸ್ಥಿತಿ ನಮ್ಮ ರಾಜ್ಯದಲ್ಲಿದೆ. ಅಂತಹ ಸಂದರ್ಭದಲ್ಲಿ ಆ ಬಡವರ ಆರೋಗ್ಯದ ಒಂದು ಜವಾಬ್ದಾರಿಯನ್ನು ಸರ್ಕಾರ ವಹಿಸಿಕೊಳ್ಳುತ್ತದೆ ಎನ್ನತಕ್ಕಂಥ ಮಾತು ಇವತ್ತು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಬಂದಿದೆ. ಅದಕ್ಕೆ ಬೇಕಾದಂಥ health insurance schemes ಕೂಡ ಇವತ್ತು ವ್ಯಾಪಕವಾಗಿ ಮಾಡುವಂಥ ಅಗತ್ಯ ಇದೆ. ಅದನ್ನೂ ಕೂಡ ಇವತ್ತು ಪ್ರಸ್ತಾಪಿಸಲಾಗಿದೆ. ಇದನ್ನು ಅತ್ಯಂತ ಸಂತೋಷದ ರೀತಿಯಲ್ಲಿ ಸ್ವಾಗತಿಸುತ್ತೇನೆ. ಇವತ್ತು ಮನೆ ಇಲ್ಲದಂಥವರಿಗೆ ಮನೆ ಕೊಡುವುದು, ಕರ್ನಾಟಕವನ್ನು hut-free ಮುಕ್ತ ರಾಜ್ಯವನ್ನಾಗಿ ಮಾಡತಕ್ಕಂಥ ಒಂದು

ಪ್ರಸ್ತಾಪ ಕೂಡ ಮಾನ್ಯ ರಾಜ್ಯಪಾಲರ ಭಾಷಣದಲ್ಲಿದೆ. ಈ ಸಂದರ್ಭದಲ್ಲಿ ನಮ್ಮ ಕರಾವಳಿ ಜಿಲ್ಲೆಗಳಲ್ಲಿ ಮತ್ತು ಅನೇಕ ಜಿಲ್ಲೆಗಳಲ್ಲಿ Coastal Regulation zone ಸಮಸ್ಯೆ ಇದೆ. ಆ ಕಾರಣದಿಂದ ಜನರಿಗೆ ಮನೆ ಕಟ್ಟಲಿಕ್ಕೆ ಅನಾನುಕೂಲವಾಗುತ್ತಿದೆ. ಆ ದೃಷ್ಟಿಯಲ್ಲಿ ನಮ್ಮ ಅರಣ್ಯ ಮತ್ತು ಪರಿಸರ ಮಂತ್ರಿಗಳು CRZ ಕಾನೂನನ್ನು ತಿದ್ದುಪಡಿ ಮಾಡಲಿಕ್ಕೆ ಪ್ರಸ್ತಾವನೆಯನ್ನು ಬೆಂಗಳೂರಿನಿಂದ ದೆಹಲಿಗೆ ಕಳುಹಿಸಬೇಕಾಗಿದೆ. CRZ ಕಾನೂನಿನಲ್ಲಿ ಗೋವಾ ಮತ್ತು ಕೇರಳದವರು ಅದಕ್ಕೆ ವಿಶೇಷವಾದ ರಿಯಾಯಿತಿಯನ್ನು ಪಡೆದಿದ್ದಾರೆ. ಕರ್ನಾಟಕದವರು ಸೂಕ್ತವಾದ ಪ್ರಸ್ತಾವನೆಯನ್ನು ಕಳುಹಿಸದೆ ಇರುವುದರಿಂದ ಅಲ್ಲಿ ಕಾನೂನಿನಲ್ಲಿಯೂ ಕೂಡ ಅಡಚಣೆ ಆಗಿದೆ. ಆ ದೃಷ್ಟಿಯಲ್ಲಿ ಕೂಡ ಒಂದು ಸೂಕ್ತವಾದ ನಿರ್ಧಾರವನ್ನು ಮಾಡಬೇಕು. ಅತ್ಯಂತ ಸಂತೋಷದ ವಿಚಾರ, ನಮ್ಮ ಸರ್ಕಾರ ಒಂದು ರೂ.ಗಳಿಗೆ ಒಂದು ಕೆ.ಜಿ. ಅಕ್ಕಿಯನ್ನು ಜುಲೈ ಒಂದರಿಂದ BPL ಕಾರ್ಡಿನವರಿಗೆ 30 ಕೆ.ಜಿ. ಅಕ್ಕಿಯನ್ನು ಕೊಡತಕ್ಕಂಥ ಘೋಷಣೆಯನ್ನು ಮಾಡಿದೆ. ಹಿಂದಿನ ಸರ್ಕಾರ ಕೂಡ 2 ರೂ.ಗಳಿಗೆ ಒಂದು ಕೆ.ಜಿ. ಅಕ್ಕಿಯನ್ನು ಕೊಡುವುದಕ್ಕೆ ಮಾಡಿದೆ. ಆದರೆ ಅದು ಬಹಳ ತಡವಾಗಿ ಚುನಾವಣೆಯ ಸಂದರ್ಭದಲ್ಲಿ ಅದನ್ನು ಅನುಷ್ಠಾನ ಮಾಡುವುದಕ್ಕೆ ಆಗದ ಪರಿಸ್ಥಿತಿಯಲ್ಲಿ ಅದನ್ನು ಘೋಷಣೆ ಮಾಡಿದೆ ಇವತ್ತು ನಮ್ಮ ಸರ್ಕಾರ ಅಧಿಕಾರವನ್ನು ಸ್ವೀಕಾರ ಮಾಡಿದ ಪ್ರಥಮ ದಿನದಲ್ಲಿಯೇ ಆ ಘೋಷಣೆಯನ್ನು ಮಾಡುವುದರ ಮೂಲಕ ನಮ್ಮ ಬಡವರ ಬಗ್ಗೆ ಇರತಕ್ಕಂಥ ಬದ್ಧತೆ ತೋರಿಸಿದೆ. ಪ್ರಾಯಶಃ ಇವತ್ತು ನಮಗೆ ಅಕ್ಕಿ ಬೇಕಾದಷ್ಟು ಬಡವರಿಗೆ ಸಿಕ್ಕಾಗ ಬೆಲೆ ಏರಿಕೆಯ ಮೇಲೆ ಕೂಡ ಬಹಳ ಪರಿಣಾಮ ಬೀರಿ taming effect ಏನಿದೆ, ಅದು ಖಂಡಿತವಾಗಿ ಆಗುತ್ತದೆ. ಆ ದೃಷ್ಟಿಯಲ್ಲಿ ಇವತ್ತು ಜನರಿಗೆ ಆಹಾರದ ಸಮಸ್ಯೆಯನ್ನು ನೀಗಿಸುವಲ್ಲಿ ಸರ್ಕಾರ ಬಹಳ ದಿಟ್ಟ ಕ್ರಮವನ್ನು ತೆಗೆದುಕೊಂಡಿದೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಕೃಷಿ ಇಲಾಖೆಯಲ್ಲಿಯೂ ಕೂಡ ಕೃಷಿ ಅಷ್ಟೊಂದು ಲಾಭದಾಯಕ ವೃತ್ತಿಯ ಒಂದು ಉದ್ಯಮ ಅಲ್ಲ ಎನ್ನತಕ್ಕಂಥ ಸಂದರ್ಭದಲ್ಲಿ ನಮ್ಮ ಕೃಷಿಕರಿಗೆ ಲಾಭದಾಯಕ ಕೃಷಿ ಮಾಡತಕ್ಕಂಥ ಒಂದು ವ್ಯವಸ್ಥೆ ಕೂಡ ಅನೇಕ ಉಲ್ಲೇಖವನ್ನು ಇವತ್ತು ರಾಜ್ಯಪಾಲರ ಭಾಷಣದಲ್ಲಿ ಮಾಡಲಾಗಿದೆ. ತೋಟಗಾರಿಕೆಗೆ ಬೇಕಾದ ಏನು ಮಾರುಕಟ್ಟೆ ಇದೆ, ಅದರ ಬಗ್ಗೆ ಕೂಡ ಇವತ್ತು ಪ್ರಸ್ತಾಪಿಸಲಾಗಿದೆ.

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ವಿಶೇಷವಾಗಿ, ನಮ್ಮ ರೈತರು ಏನು ಹಾಲನ್ನು ಉತ್ಪಾದನೆ ಮಾಡುತ್ತಾರೆ, ಅಂಥವರಿಗೆ 2 ರೂಪಾಯಿ ಇದ್ದಂತಹ ಸಬ್ಸಿಡಿಯನ್ನು 4 ರೂಪಾಯಿಗೆ ಏರಿಸುವ ಮೂಲಕ ವಿಶೇಷವಾಗಿ ಮಹಿಳೆಯರಿಗೆ ಹೊಸ ಚೇತನವನ್ನು ನಮ್ಮ ಗ್ರಾಮಾಂತರ ಪ್ರದೇಶದಲ್ಲಿ ನೀಡುವುದರ ಮೂಲಕ ಕರ್ನಾಟಕದಲ್ಲಿ ಮುಂದೆ 'ಕ್ಷೀರ ಕ್ರಾಂತಿ'ಯನ್ನು ಇನ್ನಷ್ಟು ತ್ವರಿತವಾಗಿ ಮಾಡತಕ್ಕಂಥ ಒಂದು ಘೋಷಣೆಯನ್ನು ಸರ್ಕಾರ ಮಾಡಿದ್ದಕ್ಕೋಸ್ಕರ ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತಾ, ಈ ಸಂದರ್ಭದಲ್ಲಿ ನಮ್ಮ ಗ್ರಾಮ ಪಂಚಾಯತ್ ವ್ಯವಸ್ಥೆಗಳಿಗೆ ವಿಶೇಷವಾದ ಶಕ್ತಿ ಕೊಡತಕ್ಕಂಥ ಪ್ರಸ್ತಾಪ ಕೂಡ ಬಂದಿದೆ. ಇವತ್ತು ಗ್ರಾಮ ಪಂಚಾಯತಿಗೆ ಹೆಚ್ಚಿನ ಅನುದಾನವನ್ನು ಕೊಟ್ಟಾಗ ಅವರು ಸ್ಥಳೀಯವಾಗಿ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆ. ಆ ದೃಷ್ಟಿಯಲ್ಲಿಯೂ ಕೂಡ ರಾಜ್ಯಪಾಲರ ಭಾಷಣ ಅದಕ್ಕೆ ಬೇಕಾಗುವಂತಹ ಮಾರ್ಗದರ್ಶನವನ್ನು ಕೊಟ್ಟಿದೆ. ಇವತ್ತು ಕುಡಿಯುವ ನೀರಿನ ಸಮಸ್ಯೆ ಬಹಳಷ್ಟು ದೊಡ್ಡ ಸಮಸ್ಯೆಯಾಗಿದೆ. ನಮ್ಮ ರಾಜ್ಯದ ಜನರಿಗೆ ನೂರಕ್ಕೆ ನೂರು ಕುಡಿಯುವ ನೀರಿನ ವ್ಯವಸ್ಥೆ ಮಾಡಿದರೆ, ಬಹುಶಃ ಯಾವತ್ತೂ ನಮ್ಮ ರಾಜ್ಯದ ಜನ ಮರೆಯುವುದಿಲ್ಲ ಎನ್ನುವ ಮಾತನ್ನು ಹೇಳುತ್ತಾ, ಕುಡಿಯುವ ನೀರಿನ ಕಡೆಗೂ ಕೂಡ ಸರ್ಕಾರ ವಿಶೇಷವಾಗಿ ಗಮನ ಕೊಟ್ಟಿದ್ದಕ್ಕೋಸ್ಕರ ಅಭಿನಂದನೆಯನ್ನು ಸಲ್ಲಿಸುತ್ತಾ, ಅದೇ ರೀತಿಯಲ್ಲಿ ಶೌಚಾಲಯಗಳ ನಿರ್ಮಾಣಕ್ಕೂ ಕೂಡ ಇವತ್ತು ವಿಶೇಷವಾದಂತಹ ಒತ್ತು ಕೊಡುವಂತಹ ಕೆಲಸ ಆಗಿದೆ. ಅದೇ ರೀತಿಯಲ್ಲಿ ನಮಗೆ ಬೇಕಾಗುವಂತಹ power generation ಏನಿದೆ, ಅದಕ್ಕೆ ವಿಶೇಷವಾದಂತಹ ಒಂದು importance ಅನ್ನು attach ಮಾಡುವಂತಹ ವ್ಯವಸ್ಥೆ ಆಗಿದೆ. ನನ್ನದೊಂದು ಮನವಿ ಇದೆ ಮತ್ತು ಸಲಹೆ ಇದೆ. ಎಲ್ಲಿ ಥರ್ಮಲ್ ಪ್ಲ್ಯಾಂಟ್‌ಗಳು ಆಗುತ್ತವೆ, ಆ ಸಂದರ್ಭದಲ್ಲಿ ಥರ್ಮಲ್ ಪ್ಲ್ಯಾಂಟ್‌ಗಳು ಯಾವ ತಾಲ್ಲೂಕಿನಲ್ಲಿ ಇರುತ್ತವೆ, ಆ ತಾಲ್ಲೂಕಿಗೆ ನೂರರಷ್ಟು ವಿದ್ಯುತ್ ಅನ್ನು ಕೊಟ್ಟು ಉಳಿಕೆಯ ವಿದ್ಯುತ್ ಅನ್ನು ಬೇರೆ ತಾಲ್ಲೂಕುಗಳಿಗೆ ಕಳುಹಿಸುವಂತಹ ವ್ಯವಸ್ಥೆ ಆಗಬೇಕು. ಏಕೆಂದರೆ, ಥರ್ಮಲ್ ಪ್ಲ್ಯಾಂಟ್ ಎಂದು ಹೇಳಿದ ಕೂಡಲೇ, ಅಲ್ಲಿ ಬೂದಿ ಉತ್ಪಾದನೆ ಆಗುತ್ತದೆ. ಬೂದಿ ಮಾತ್ರ ಆ ತಾಲ್ಲೂಕಿಗೆ ಕೊಟ್ಟು, ಕರೆಂಟ್ ಅನ್ನು ಬೇರೆ ತಾಲ್ಲೂಕಿಗೆ ಕೊಟ್ಟರೆ ಎಲ್ಲೂ ಕೂಡ ಜನರು ಜಾಗ ಕೊಡುವುದಿಲ್ಲ. ಯಾವ ತಾಲ್ಲೂಕಿನಲ್ಲಿ ಥರ್ಮಲ್ ಯೂನಿಟ್ ಇರುತ್ತದೆ, ಅಲ್ಲಿಗೆ ಬೇಕಾಗುವಂತಹ ನೂರಕ್ಕೆ ನೂರು ವಿದ್ಯುತ್ ಕೊಡುವಂತಹ ಘೋಷಣೆಯನ್ನು ಸರ್ಕಾರ ಮಾಡಿದರೆ ಎಲ್ಲಾ ಕಡೆ ನಮ್ಮ ತಾಲ್ಲೂಕಿಗೆ ಬರಲಿ ಎಂದು ಸ್ವಾಗತ ಮಾಡುವಂತಹ ವ್ಯವಸ್ಥೆಯಾಗುತ್ತದೆ. ಅದನ್ನು ದಯವಿಟ್ಟು ಸರ್ಕಾರ

ಗಮನಹರಿಸಬೇಕೆಂದು ಒಂದು ಸೂಚನೆಯನ್ನು ಈ ಸಂದರ್ಭದಲ್ಲಿ ಕೊಡುತ್ತಾ, ಇವತ್ತು Public Works Department ನಲ್ಲಿ ಬಹಳಷ್ಟು ಭ್ರಷ್ಟಾಚಾರ ನಡೆಯುವಂತಹ ಒಂದು ವ್ಯವಸ್ಥೆ ನಡೆದಿದೆ. SR rate ನಲ್ಲಿಯೇ ತಪ್ಪುಗಳಿವೆ. ಏಕೆಂದರೆ ಬಹಳ inflated SR rate ಇದೆ. ಇವತ್ತು ಒಂದು ಕಿ.ಮೀ. ರಸ್ತೆ ಮಾಡಬೇಕಾದರೆ 20 ಲಕ್ಷ ರೂಪಾಯಿ ಎಂದು ಹೇಳುತ್ತಾರೆ. ನಮ್ಮ ಎಂ.ಎಲ್.ಎ. ಗ್ರ್ಯಾಂಟ್ ಒಂದು ಕೋಟಿ ರೂಪಾಯಿ ಬಂದರೆ 5 ಕಿ.ಮೀ. ರಸ್ತೆಯಲ್ಲಿ ಅವೆಲ್ಲಾ ಮುಗಿಯುತ್ತದೆ. ಹಾಗಾಗಿ current SR rate ಏನಿದೆ, ಅದನ್ನು ಬಹಳಷ್ಟು inflate ಮಾಡುವಂತಹ ಭ್ರಷ್ಟಾಚಾರಕ್ಕೆ ಎಡೆ ಮಾಡಿಕೊಡುವಂತಹ ವ್ಯವಸ್ಥೆ ಆಗಿದೆ. ನಿಜವಾದ SR rate ಎಷ್ಟು ಎನ್ನುವುದರ ಬಗ್ಗೆ ತನಿಖೆ ಮಾಡಿ SR rate ಅನ್ನು ಸರಿಯಾದ ಕ್ರಮದಲ್ಲಿ ಭರಿಸಬೇಕೆನ್ನುವ ಸಲಹೆಯನ್ನು ಈ ಸಂದರ್ಭದಲ್ಲಿ ಹೇಳುತ್ತಾ, 'ನರೇಗಾ ಯೋಜನೆ'ಯನ್ನು ಕೂಡ ಅತ್ಯಂತ ವ್ಯವಸ್ಥಿತವಾಗಿ ಮಾಡುತ್ತೇವೆ ಎನ್ನುವ ಘೋಷಣೆಯನ್ನು ಸರ್ಕಾರ ಮಾಡಿದೆ. ಡಾ.ಮನಮೋಹನ್ ಸಿಂಗ್ ನೇತೃತ್ವದ ಸರ್ಕಾರ ಬಹಳ ದೊಡ್ಡ ಯೋಜನೆಯಾದ 'ನರೇಗಾ ಯೋಜನೆ' ನಮ್ಮ ಗ್ರಾಮಾಂತರ ಜನರಿಗೆ ಒಂದು ವಿಶೇಷವಾದ ಉದ್ಯೋಗವನ್ನು ಕೊಡತಕ್ಕಂಥ ಒಂದು ವ್ಯವಸ್ಥೆ. ಅದೇ ರೀತಿಯಲ್ಲಿ urban development ಇವತ್ತು ನಗರಾಭಿವೃದ್ಧಿ ಇಲಾಖೆ, ನಮ್ಮ ನಗರ ಪ್ರದೇಶಗಳಲ್ಲಿ 38% population ಇದೆ ಎಂದು ಹೇಳಿದರೂ, ನನ್ನ ಲೆಕ್ಕದಲ್ಲಿ 50% population ಇದೆ. ಏಕೆಂದರೆ, migrated workers ಯಾರ್ಯಾರು ಇದ್ದಾರೆ, ಬೇರೆ ಬೇರೆ ಹಳ್ಳಿ ಪ್ರದೇಶದಿಂದ ನಗರ ಪ್ರದೇಶಕ್ಕೆ ಬರುವಂತಹ ಜನರು ಇವತ್ತು ನಗರ ಪ್ರದೇಶದಲ್ಲಿ ಇದ್ದಾರೆ. ಅವರಿಗೆ ಯಾವುದೇ ರೇಷನ್ ಕಾರ್ಡ್ ಕೊಡುತ್ತಿಲ್ಲ. ಅವರ ಸಂಖ್ಯೆ ಗೊತ್ತಿಲ್ಲ. ಅವರಿಗೆ ವೋಟಿಂಗ್ ಇಲ್ಲ. ಯಾವುದೂ ಗೊತ್ತಿಲ್ಲದೇ ಪ್ರಾಯಶಃ ನಗರಾಭಿವೃದ್ಧಿ ಪ್ರದೇಶದಲ್ಲಿ 50% ಜನರು ಇರುವಂತಹ ಸಂದರ್ಭದಲ್ಲಿ ಸೂಕ್ತವಾದಂತಹ under-ground ವ್ಯವಸ್ಥೆ, under-ground ಇರಬಹುದು, solid waste management ಇರಬಹುದು, ಇದರ ಬಗ್ಗೆ ನಗರಗಳು ಕುಸಿದು ಬೀಳುವಂತಹ ಪ್ರಮೇಯ ಇರುವುದರಿಂದ ನಗರಾಭಿವೃದ್ಧಿ ಇಲಾಖೆಗೆ ಹೆಚ್ಚಿನ ಒತ್ತು ಕೊಡತಕ್ಕಂಥ ಘೋಷಣೆ ಸರ್ಕಾರ ಮಾಡಿರುವುದು ಬಹಳ ಸಂತೋಷ ಎನ್ನುವಂತಹ ಮಾತನ್ನು ಹೇಳುತ್ತಾ, ಕಂದಾಯ ಇಲಾಖೆ ಪ್ರಾಯಶಃ ಚೆನ್ನಾಗಿ ಕೆಲಸ ಮಾಡಿದರೆ, ಇಡೀ ರಾಜ್ಯವೇ ಸರಿಯಾಗಿ ಕೆಲಸ ಮಾಡಿತು ಎಂದು ಲೆಕ್ಕ.

ಇವತ್ತು ನಮ್ಮ ಹಿರಿಯರಾದಂತಹ ಶ್ರೀನಿವಾಸ ಪ್ರಸಾದ್‌ರವರು ಕಂದಾಯ ಮಂತ್ರಿಗಳಾಗಿದ್ದಾರೆ. ಜನರಿಗೆ ಅತ್ಯಂತ ಕಿರುಕುಳ ಆಗತಕ್ಕಂಥದ್ದು ಕಂದಾಯ ಇಲಾಖೆಯ ಕಛೇರಿಗಳಿಗೆ ಭೇಟಿ ಕೊಟ್ಟಾಗ. ಅಲ್ಲಿ ಭ್ರಷ್ಟಾಚಾರರಹಿತವಾದ ಆಡಳಿತವಾಗಬೇಕು. ಯಾವ ಫೈಲ್‌ಗಳೂ ಕೂಡ ಇವತ್ತು ದುಡ್ಡು ಕೊಟ್ಟರೆ ಫೈಲ್ ಪಾಸ್ ಆಗುತ್ತದೆ. ದುಡ್ಡು ಕೊಡದೇ ಹೋದರೆ ಫೈಲ್ move ಆಗದಂತಹ ಪರಿಸ್ಥಿತಿ ಇರುವುದರಿಂದ ಕಂದಾಯ ಇಲಾಖೆಯಲ್ಲಿ ಸರಿಯಾದಂತಹ ರೀತಿಯಲ್ಲಿ ಕೆಲಸ ಮಾಡಿದರೆ, ಅರ್ಧ ಒಳ್ಳೆಯ ಹೆಸರು ಸರ್ಕಾರಕ್ಕೆ ತಾನಾಗಿಯೇ ಬರುತ್ತದೆ ಎನ್ನುವ ಮಾತನ್ನು ಹೇಳುತ್ತಾ, ಪ್ರಾಯಶಃ ಇವತ್ತು ವರ್ಗಾವಣೆಯಲ್ಲಿ ಹಣದ ಒಂದು ಪ್ರಭಾವ ಬಹಳಷ್ಟು ಇದೆ ಎನ್ನುವ ಮಾತನ್ನು ಇವತ್ತು ಮಾನ್ಯ ಬಸವರಾಜ ರಾಯರೆಡ್ಡಿಯವರು ಹೇಳಿದರು. ಇವತ್ತು ವರ್ಗಾವಣೆಗಳು ಕೇವಲ performance and efficiency ಆಧಾರದ ಮೇಲೆ ಮಾಡುತ್ತೇವೆ ಎನ್ನುವ ಘೋಷಣೆ ನಡೆದಿದೆ. ನನ್ನ ಲೆಕ್ಕದಲ್ಲಿ ಜನಪ್ರತಿನಿಧಿಗಳು ಮತ್ತು ಅಧಿಕಾರಶಾಹಿ ಇಬ್ಬರೂ ಒಟ್ಟಾದರೆ ಮಾತ್ರ ಸರ್ಕಾರ ನಡೆಸಿಕೊಂಡು ಹೋಗಲಿಕ್ಕೆ ಸಾಧ್ಯವಾಗುತ್ತದೆ. ಒಂದು ಸಂಸಾರದಲ್ಲಿ ಹೇಗೆ ಗಂಡ ಮತ್ತು ಹೆಂಡತಿ ಇಬ್ಬರೂ ಇರುತ್ತಾರೆ, ಆ ಗಂಡ–ಹೆಂಡತಿ ಒಟ್ಟಾಗಿ ಇದ್ದರೆ ಮಾತ್ರ ಸಂಸಾರ ನಡೆಸಿಕೊಂಡು ಹೋಗಲಿಕ್ಕೆ ಸಾಧ್ಯವಾಗುತ್ತದೆ. ಗಂಡನ ಸ್ಥಾನದಲ್ಲಿ ಜನ ಪ್ರತಿನಿಧಿಗಳು, ಹೆಂಡತಿಯ ಸ್ಥಾನದಲ್ಲಿ ಸರ್ಕಾರಿ ನೌಕರರು ಇರುತ್ತಾರೆ, ಅಧಿಕಾರಶಾಹಿ ಇರುತ್ತದೆ. ಏಕೆಂದರೆ ಡೆಲಿವರಿ ಮಾಡಬೇಕಾದರೆ, ಹೆಂಡತಿಯಿಂದ ಮಾತ್ರ ಡೆಲಿವರಿ ಮಾಡಲಿಕ್ಕೆ ಸಾಧ್ಯ ವಿನಃ ಎಷ್ಟೇ ಗಂಡ ದೊಡ್ಡ ಜನ ಆದರೂ ಡೆಲಿವರಿ ಮಾಡುವುದಕ್ಕೆ ಆಗುವುದಿಲ್ಲ. ಸರ್ಕಾರದ ಪಾಲಿಸಿಗಳಾಗಲಿ, ಸರ್ಕಾರದ ನೀತಿಗಳಾಗಲಿ, ಇವತ್ತು ಡೆಲಿವರಿ ಆಗಬೇಕಾದರೆ ಅಧಿಕಾರಶಾಹಿಯಿಂದ ಮಾತ್ರ ಸಾಧ್ಯ. ಆ ರೀತಿಯಲ್ಲಿ ಗಂಡ–ಹೆಂಡತಿ ಹೇಗಿರಬೇಕೋ ಅದೇ ರೀತಿಯಲ್ಲಿ ಸರ್ಕಾರದಲ್ಲಿಯೂ ಕೂಡ ಜನಪ್ರತಿನಿಧಿಗಳು ಹಾಗೂ ಅಧಿಕಾರಶಾಹಿಗಳು ಇರಬೇಕು. ಹೆಂಡತಿಯನ್ನು ಬಹಳ ಲೂಸ್ ಆಗಿ ಬಿಟ್ಟರೂ ಕಷ್ಟ. ಏಕೆಂದರೆ ಸಂಸಾರಕ್ಕೆ ಬಹಳಷ್ಟು ಕೆಟ್ಟ ಹೆಸರನ್ನು ತರುವಂತಹ ವ್ಯವಸ್ಥೆ ಆಗುತ್ತದೆ. ಆ ದೃಷ್ಟಿಯಿಂದ ಅಧಿಕಾರಶಾಹಿಯನ್ನೂ ಕೂಡ controlನಲ್ಲಿಡಬೇಕು. ಅವರ ಮೇಲೆ ದಬ್ಬಾಳಿಕೆ ಮಾಡುವಂತಹ ಅತ್ಯಂತ ಅಸೌಜನ್ಯದಿಂದ ನಡೆಯುವುದೂ ಕೂಡ ಸರಿಯಲ್ಲ. ಹಾಗಾಗಿ ಗಂಡ–ಹೆಂಡತಿ ಹೇಗೆ ಸಂಸಾರವನ್ನು ಮಾಡುತ್ತಾರೋ ಅದೇ ರೀತಿಯಲ್ಲಿ ನಮ್ಮ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳ ಮಧ್ಯೆ ಸಂಬಂಧವನ್ನು ಬೆಳೆಸಿಕೊಂಡು

ಹೋಗಬೇಕು. ಆ ದೃಷ್ಟಿಯಲ್ಲಿ ಪ್ರಾಯಶಃ ಬೆಂಗಳೂರಿನಲ್ಲಿ Indian Institute of Management ಏನಿದೆ, ಅವರ ಸಲಹೆಯನ್ನು ಪಡೆದು the entire transfer policy should be transparent. It should be based only on performance and efficiency and nothing else. ಯಾವಾಗ ನಾವು ಅಧಿಕಾರಿಗಳ ಒಂದು efficiency and performance ನೋಡಲಿಕ್ಕೆ ಶುರು ಮಾಡುತ್ತೇವೆಯೋ ಆಗ ಮಾತ್ರ ಸರ್ಕಾರಕ್ಕೆ ಒಳ್ಳೆಯ ಹೆಸರನ್ನು ತರಲಿಕ್ಕೆ ಸಾಧ್ಯ. ಆ ದೃಷ್ಟಿಯಲ್ಲಿ ರಾಜ್ಯಪಾಲರ ಭಾಷಣದಲ್ಲಿ ಏನು administrative reforms ನ ಬಗ್ಗೆ ಮಾತನಾಡಿದ್ದರೆ, ಅದನ್ನು ಅತ್ಯಂತ ಸಂತೋಷದಿಂದ ಸ್ವಾಗತಿಸುತ್ತಾ, ಈ ಸಂದರ್ಭದಲ್ಲಿ ಶ್ರೀಮಾನ್ ಸಿದ್ದರಾಮಯ್ಯನವರು ಬಹಳ ಬಿಗು ಆಡಳಿತ ಕೊಡತಕ್ಕಂಥ ಒಂದು ಹೆಸರನ್ನು ಪಡೆದಿರತಕ್ಕಂಥವರು. ಇವತ್ತು tax evasion ಗೆ zero tolerance ಕೊಡುತ್ತೇನೆ ಎನ್ನುವ ಮಾತನ್ನು ಹೇಳಿದ್ದಾರೆ. ಏಕೆಂದರೆ ತೆರಿಗೆ ಸಂಗ್ರಹ ಆಗದಿದ್ದರೆ ಯಾವುದೇ ಅಭಿವೃದ್ಧಿ ಕೆಲಸವಾಗುವುದಿಲ್ಲ. ಆದರೆ ತೆರಿಗೆಯನ್ನು ಹೇಗೆ collect ಮಾಡಬೇಕೆಂದು ಚಾಣಕ್ಯ ತನ್ನ ಅರ್ಥಶಾಸ್ತ್ರದಲ್ಲಿ ಹೇಳಿದ್ದಾನೆ. ಯಾವ ರೀತಿಯಲ್ಲಿ ಜೇನು ಹೋಗಿ ಆ ಹೂವಿಗೆ ತೊಂದರೆಯಾಗದಂತೆ, ಕಷ್ಟವಾಗದಂತೆ honey ಅನ್ನು collect ಮಾಡುತ್ತದೆಯೋ ಅದೇ ರೀತಿಯಲ್ಲಿ ನಮ್ಮ ಆಡಳಿತ ಕೂಡ ಇರಬೇಕು. Taxation ಕೂಡ ಅತ್ಯಂತ ಸರಳವಾಗಿ, ಅತ್ಯಂತ ಸಮಂಜಸವಾಗಿದ್ದರೆ ಜನರು ತೆರಿಗೆ ಕಟ್ಟಲಿಕ್ಕೆ ಮುಂದೆ ಬರುತ್ತಾರೆ. ಆ ರೀತಿಯಲ್ಲಿ 100% tax collection ಆಗುವಂತಹ ರೀತಿಯಲ್ಲಿ ಈ ಸರ್ಕಾರ ಮುಂದುವರೆಯುತ್ತದೆ ಎನ್ನುವ ಬರವಸೆಯನ್ನು ರಾಜ್ಯಪಾಲರ ಭಾಷಣದಲ್ಲಿ ಕೊಟ್ಟಿದ್ದಾರೆ. ಪ್ರಾಯಶಃ ನನ್ನ ಹಾರೈಕೆ ಈ ಒಂದು ಸಂಪುಟ, ಈ ಮುಖ್ಯಮಂತ್ರಿಗಳು, ಈ ಸರ್ಕಾರ, ಈ ಜನರ ಭಾವನೆಗಳಿಗೆ ತಕ್ಕಂತೆ ಬಹಳ ನಿರೀಕ್ಷೆ ಇಟ್ಟು ಜನ ಏನು ನಮ್ಮನ್ನು ಇಲ್ಲಿ ಗೆಲ್ಲಿಸಿ ಸರ್ಕಾರ ಮಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ, ಆ ಜನರ ನಿರೀಕ್ಷೆಗೆ ಯಾವುದೇ ಚ್ಯುತಿ ಬಾರದ ರೀತಿಯಲ್ಲಿ ನಾವೆಲ್ಲ ಒಂದಾಗಿ ಒಟ್ಟಾಗಿ ಪ್ರಾಮಾಣಿಕವಾಗಿ ಈ ರಾಜ್ಯದ ಜನತೆಯ ಸೇವೆ ಮಾಡೋಣ. ಈ ಸರ್ಕಾರ ಐದು ವರ್ಷದಲ್ಲಿ ಇಡೀ ಭಾರತ ದೇಶದಲ್ಲಿಯೇ ಕರ್ನಾಟಕ ನಂ.1 ಎಂದು ಆಗುವ ರೀತಿಯಲ್ಲಿ ನಡೆಯಲಿ ಎಂದು ಈ ಸಂದರ್ಭದಲ್ಲಿ ಹಾರೈಕೆ ಮಾಡುತ್ತಾ, ರಾಜ್ಯಪಾಲರ ಭಾಷಣಕ್ಕೆ ನನ್ನ ಕೃತಜ್ಞತೆಯನ್ನು, ವಂದನೆಯನ್ನು ಪುನಃ ಅರ್ಪಿಸುತ್ತಾ ನನ್ನ ಎರಡು ಮಾತುಗಳನ್ನು ಮುಗಿಸುವುದರೊಂದಿಗೆ ನನಗೆ ತಾವು ಮಾತನಾಡಲು ಅವಕಾಶ

ಮಾಡಿಕೊಟ್ಟಿದ್ದೀರಿ. ಅದೇ ರೀತಿಯಲ್ಲಿ ಹೊಸ ಶಾಸಕರು ಯಾರ್ಯಾರು ಬಂದಿದ್ದಾರೆ, ಅವರಿಗೂ ಮಾತನಾಡಲು ಅವಕಾಶ ಮಾಡಿಕೊಡಬೇಕೆಂದು ಮಾನ್ಯ ಅಧ್ಯಕ್ಷರಲ್ಲಿ ಮನವಿಯನ್ನು ಮಾಡುತ್ತಾ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ. ಜೈಹಿಂದ್.

8. ಸಂದೇಶ

ವಿಷಯ: Message under Article 200 of the Constitution of India

ಅಧ್ಯಕ್ಷರು : ಒಂದು message ಇದೆ.

"MESSAGE UNDER ARTICLE 200 OF CONSTITUTION OF INDIA TO THE KARNATAKA LEGISLATIVE ASSEMBLY AND KARNATAKA LEGISLATIVE COUNCIL IN RESPECT OF THE KARNATAKA LAND REVENUE (SECOND AMENDMENT) BILL,2012, WHICH AFTER ITS PASSAGE THROUGH BOTH THE HOUSES OF THE LEGISLATURE HAS BEEN SUBMITTED FOR OBTAINING THE ASSENT OF THE GOVERNOR(L.A.BILL NO.45 OF 2012)

The Karnataka Land Revenue (Second Amendment) Bill, 2012 seeking to insert a new section 94 cc in the Karnataka Land Revenue Act, 1964, providing for grant of land in the case of unauthorized construction of dwelling houses in Government land in urban areas, has been passed by both the Houses of the Legislature. This legislation has been brought with the intention of regularizing unauthorized occupation of revenue land belonging to Government in urban areas with dwelling houses constructed prior to the 1 january, 2012, by granting the land to unauthorized occupants.

Section 94C of the Karnataka Land Revenue Act provided for the same object which was in force from 14.04.1998.This Section provided for grant of land belonging to Government and unauthorizedly occupied by a person, where the dwelling house was constructed prior